# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 419 (420) |
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 10.07.2023. |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು. |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸರ್ಕಾರದಿಂದ ಪ್ರತಿ ವರ್ಷ ನೀಡುತ್ತಿರುವ ಅನುದಾನ ಎಷ್ಟು; ಇದನ್ನು ಯಾವ ಯಾವ ಕೆಲಸಗಳಿಗೆ ಬಳಸಿಕೊಳ್ಳಲಾಗಿದೆ; (ಕಳೆದ ಐದು ವರ್ಷಗಳ ವಿವರ ನೀಡುವುದು)</td><td>ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಕಳೆದ ಐದು ವರ್ಷ ಒದಗಿಸಿರುವ ಅನುದಾನದ ವಿವರ ಕೆಳಕಂಡಂತಿದೆ:-
<table>
<tr><th>ಕ್ರ.ಸಂ</th><th>ವರ್ಷ</th><th>ಮೊತ್ತ<br>(ರೂ.ಲಕ್ಷಗಳಲ್ಲಿ)</th></tr>
<tr><td>1</td><td>2018-19</td><td>150.00</td></tr>
<tr><td>2</td><td>2019-20</td><td>100.00</td></tr>
<tr><td>3</td><td>2020-21</td><td>403.00</td></tr>
<tr><td>4</td><td>2021-22</td><td>50.00</td></tr>
<tr><td>5</td><td>2022-23</td><td>1166.00</td></tr>
<tr><td></td><td>ಒಟ್ಟು</td><td>1869.00</td></tr>
</table>
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಕಳೆದ ಐದು ವರ್ಷ ಒದಗಿಸಿರುವ ಅನುದಾನವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆ:-<br>
1. ಅಧ್ಯಯನ ವಿಭಾಗಗಳ ವೈಯಕ್ತಿಕ ಯೋಜನೆ ಮತ್ತು ಸಾಂಸ್ಥಿಕ ಯೋಜನೆ, ವಿಚಾರಣ ಸಂಕಿರಣ, ಸಾಧಿಲ್ವಾರು ಮತ್ತು ಪ್ರಯಾಣ ಭತ್ಯೆ.<br>
2. ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು, ಉಪಕುಲಚಿವರು, ಸಹಾಯಕ ಕುಲಸಚಿವರು, ಕಾನೂನು ಸಲಹಾ ಘಟಕ, ಯೋಜನಾಧಿಕಾರಿ ವಿಭಾಗಗಳ ಸಾಧಿಲ್ವಾರು ಘಟಕ, ಯೋಜನಾಧಿಕಾರಿ ವಿಭಾಗಗಳ ಸಾಧಿಲ್ವಾರು, ಕಚೇರಿ ನಿರ್ವಹಣೆ, ಸಭೆ ಮತ್ತು ಪ್ರಯಾಣ ಭತ್ಯೆ.<br>
3. ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ತಾತ್ಕಾಲಿಕ ಗುತ್ತಿಗೆದಾರರ ಸ್ವಚ್ಛತೆ ಮತ್ತು ಭದ್ರತಾ ಸಿಬ್ಬಂದಿಗಳ ವೇತನ.<br>
4. ಕಟ್ಟಡಗಳ ನಿರ್ವಹಣೆ, ತಾಂತ್ರಿಕ ವಿಭಾಗ ದೂರವಾಣಿ ಬಿಲ್, ವಿದ್ಯುತ್ ಬಿಲ್, ನೀರಿನ ಸರಬರಾಜು, ಇಂಧನ ಖರೀದಿ ಮತ್ತು</td></tr>
</table>

| | | |
|---|---|---|
| | | ತೋಟಗಾರಿಕೆ ವೆಚ್ಚಗಳು.<br>5. ಅಧ್ಯಯನಾಂಗ, ದರ್ಪಣ ಕೇಂದ್ರ, ಗ್ರಂಥಾಲಯ, ಪ್ರಿಂಟರ್ ಕಾರ್ಟ್ರೇಜ್ ಖರೀದಿ, ಜೆರಾಕ್ಸ್ ಯಂತ್ರ ನಿರ್ವಹಣೆ.<br>6. ನುಡಿಹಬ್ಬ, ನಮ್ಮಹಬ್ಬ, ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿ, ನಾಡಹಬ್ಬ ಆಚರಣೆ ಮತ್ತು ಆರೋಗ್ಯ ಕೇಂದ್ರಕ್ಕೆ ಔಷಧಿ ಖರೀದಿ.<br>7. ಚಿತ್ರಕಲೆ ಡಿಪ್ಲೋಮಾ ಮತ್ತು ಪದವಿ ಪಠ್ಯಕ್ರಮ ತರಬೇತಿ ಕಾರ್ಯಕ್ರಮ ಮತ್ತು ಚಿತ್ರಕಲಾ ಶಿಬಿರ, ಶಿಲ್ಪಕಲಾ ಶಿಬಿರ, ಪರೀಕ್ಷಾ/ಮೌಲ್ಯಮಾಪನ. |
| ಆ) | ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಳೆದ ವರ್ಷ ವಿದ್ಯುತ್ ಬಿಲ್‌ನ್ನು ಸಹ ಕಟ್ಟಲು ಅನುದಾನವಿಲ್ಲದೆ ರೂ.85.00ಲಕ್ಷಗಳ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲು ಸರ್ಕಾರಕ್ಕೆ ಕುಲಪತಿಗಳು ಪತ್ರ ಬರೆದಿರುವುದು ನಿಜವೇ; ಹಾಗಿದ್ದಲ್ಲಿ, ಈ ಹಣವನ್ನು ಮನ್ನಾ ಮಾಡಲು ಅಥವಾ ಹೆಚ್ಚಿನ ಅನುದಾನವನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಇದನ್ನು ಮಾಡಲಾಗುವುದು; (ವಿವರ ನೀಡುವುದು) | ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲು ಸರ್ಕಾರಕ್ಕೆ ಯಾವುದೇ ಕೋರಿಕೆ ಇರುವುದಿಲ್ಲ. ಆದರೆ, ವಿದ್ಯುತ್ ಬಿಲ್ಲು ಪಾವತಿಗಾಗಿ ಹೆಚ್ಚುವರಿ ಅನುದಾನ ಕೋರಿದ್ದು, ಈ ಸಂಬಂಧ ಆರ್ಥಿಕ ಇಲಾಖೆಯು ಕನ್ನಡ ವಿಶ್ವವಿದ್ಯಾಲಯಕ್ಕೆ ಅಭಿವೃದ್ಧಿ ಕಾರ್ಯಗಳಿಗಾಗಿ ಯಾವುದೇ ಹೆಚ್ಚುವರಿ ಅನುದಾನವನ್ನು ಒದಗಿಸಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿರುತ್ತದೆ. |
| ಇ) | ಹಂಪಿ ವಿ.ವಿ.ಯಲ್ಲಿ ಈ ವಿದ್ಯುತ್ ಸ್ವಾವಲಂಬನೆಯನ್ನು ಸಾಧಿಸಲು ಹೆಚ್ಚಿನ ಅನುದಾನವನ್ನು ನೀಡಿದ್ದಲ್ಲಿ, ಅದನ್ನು ಬಳಸಿಕೊಳ್ಳಲು ವಿ.ವಿಯ ಚಿಂತನೆ ಮತ್ತು ಹೆಚ್ಚಿನ ಅನುದಾನವನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

ಸಂಖ್ಯೆ: ಇಡಿ 67 ಹೆಚ್‌ಪಿಯು 2023)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು.